ಶ್ರೀ ಆರ್. ರಾಜೂಗೌಡ.—ತಾವು ಈ ವಿಷಯವನ್ನು ಚೆನ್ನಾಗಿ ಅಧ್ಯಯನ ಮಾಡಿ ಗೇಣಿದಾರರಿಗೆ ಮತ್ತು ಭೂಮಾಲೀಕರಿಗೆ ಅನ್ಯಾಯವಾಗದಂತೆ ಸಮತೋಲನ ರೀತಿಯಲ್ಲಿ ಪರಿಹಾರ ಧನವನ್ನು ನೀಡಲು ವಿಚಾರಿಸಿರುವುದು ಒಳ್ಳೆಯದು. ಅಲ್ಲಿಯವರೆಗೆ, ತಾವು ಏನು ಈಗಾಗಲೇ ಆದೇಶವನ್ನು ಹೊರಡಿಸಿ ಹಿಂದೆ ಜಾಸ್ತಿ ಕೊಟ್ಟಿರತಕ್ಕ ಪರಿಹಾರ ಧನವನ್ನು ವಾಪಸ್ಸು ಕೊಡಬೇಕೆಂದು ಮಾಡಿದ್ದೀರಿ ಅದನ್ನು ದಯಮಾಡಿ ವಾಪಸ್ಸು ತೆಗೆದುಕೊಳ್ಳುವುದಾಗಿ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ನಾನು ಇದಕ್ಕೆ ತಕ್ಷಣ ನೇರವಾಗಿ ಉತ್ತರ ಕೊಡಲಾರೆ. ಪರಿಶೀಲನೆ ಮಾಡುತ್ತೇನೆ ಎಂದು ಮಾತ್ರ ಹೇಳಬಲ್ಲೆ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಭೂಸುಧಾರಣೆ ಕಾಯಿದೆಗೆ ಹಲವಾರು ತಿದ್ದುಪಡಿ ಮಾಡಿ ಕಳುಹಿಸಿದ್ದೇವೆ. ತಿದ್ದುಪಡಿ ಮಾಡಬೇಕೆಂದು ಸಲಹೆ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಅದು ಇನ್ನೂ ಬಂದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ನೀವು ಏನು ಮಾಡಬೇಕೆಂದಿದ್ದೀರೋ ಅದನ್ನು ತಿದ್ದುಪಡಿ ಮೂಲಕ ತಂದು ಮಂಜೂರಾತಿ ಪಡೆಯಬಹುದಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾವು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಅದಿನ್ನೂ ಬಂದಿಲ್ಲ. ಮತ್ತೆ ನಿಮ್ಮ ಸಲಹೆಯನ್ನೂ ಕೇಂದ್ರ ಸರ್ಕಾರಕ್ಕೆ ಕಳಿಸಿಕೊಡೋಣ. ಈ ವಿಧಾನಸಭೆ ನಡೆಯುತ್ತಿರುವುದರಿಂದ ತಿದ್ದುಪಡಿ ತಂದು ಇಲ್ಲೇ ಮಾಡುವುದಕ್ಕೆ ಅವಕಾಶವಿದೆ.

MR. SPEAKER,—Questions are over.

QUESTIONS FOR ANSWERS ON THE DAY
(but not taken up)

Kannada Examination for Government Servants

93. SRI G. RAME GOWDA (Doddaballapur).—Will the Chief Minister be pleased to state.—

(*a*) whether the Government has fixed any time limit for all Government servants in the State to pass Kannada Examination;

(*b*) whether it is obligatory for the Government servants to pass Kannada Test prescribed;

(*c*) if so, whether the Government servants who have passed in the written Kannada examination have not been given the benefit of increments stating that they have failed in *Vivavoce*;

(*d*) whether it has come to the notice of Government that many Nurses who are conversant with Kannada and who talk in Kannada Language fluently have been denied the benefit of increment stating that they have failed in *Viva-voce* ?

SRI R. GUNDU RAO (Chief Minister).—

(*a*) Yes.

(*b*) Yes.

(*c*) Yes.

(*d*) No.